(*b*) Orders sanctioning a Health Unit Type Dispensary at Kollur and to shift the existing Rural Dispensary (Ayurvedic) from Kollur to Kalthod village in Coondapur Taluk have been issued in G O. No. HMA 211 PPS 71, dated 24th November 1972.

Proposals for sanction of a Health Unit Type Dispensary at Shiroor has not been received.

ಶ್ರೀ ಯು. ಟಿ. ಫರೀದ್.—ನಾನು ಈ ಪ್ರಶ್ನೆಗೆ ನಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಲು ಬಯಸುವುದಿಲ್ಲ.

Hoarding of Foodgrains

352. **H. D. DEVE GOWDA** (Holenarasipur).—

Will the Minister of State for Food and Civil Supplies be pleased to state :—

(*a*) the number of persons in the State against whom action has been taken for hoarding essential commodities of daily need illegaly (Detailed information may be furnished upto 31st December 1972) ;

(*b*) out of them, the number of cases against whom prosecution were launched have been withdrawn (Detailed information may be furnished upto 31st December 1972) ?

Smt. E. E. VAZ (Minister of State for Food and Civil Supplies),—

(*a*) 3,356,

(*b*) 203. Further details can be had from the statement placed on the Table of the House.*

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ 513 ಕೇಸುಗಳನ್ನು ಡ್ರಾಪ್ ಮಾಡರಾಗಿದೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

† ಶ್ರೀಮತಿ ಇ. ಇ. ವಾಜ್.—ಯಾವ ಕೇಸುಗಳು ಪ್ರೂವ್ ಆಗಿಲ್ಲ ಅಂಥಾ ಕೇಸುಗಳನ್ನೂ ಮತ್ತು ಮಿಸ್ಟೇಕ್ ಆಗಿರತಕ್ಕ ಕೇಸುಗಳನ್ನೂ ಡ್ರಾಪ್ ಮಾಡಿದೆ. ಮತ್ತು 3356 ಕೇಸುಗಳ ಸಂಬಂಧದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—203 ಕೇಸುಗಳನ್ನು ವಿತ್‌ಡ್ರಾ ಮಾಡಿದ್ದೇವೆ ಎಂದು ಹೇಳಿದ್ದೀರಿ, ಇದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಸರಿಯಾಗಿ ಪ್ರೂಫ್ ಇಲ್ಲದೆ ಇರತಕ್ಕ ಕೇಸುಗಳನ್ನೂ ಮತ್ತು ಆಫೀಸರುಗಳು ಕೊಟ್ಟಂತಹ ಕೇಸುಗಳಲ್ಲಿ ಮಿಸ್ಟೇಕ್ ಆಗಿದ್ದಂತಹ ಕೇಸುಗಳನ್ನೂ ವಿತ್‌ಡ್ರಾ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇ ಗೌಡ.—ಚಾರ್ಜ್ ಷೀಟ್ ಹಾಕುವಾಗ ನಿಮ್ಮ ಅಧಿಕಾರಿಗಳು ನೋಡುವುದಿಲ್ಲವೇ ; ಮತ್ತು ಇದು ನಿಮ್ಮ ಪಕ್ಷದ ರಾಜಕೀಯ ಒತ್ತಡದಿಂದ ಆಗಿರುವುದು ಎಂದು ಒಪ್ಪಿಕೊಳ್ಳುತ್ತೀರಾ ?

---

* Library *Vide* No. 23, Dated 26-3-1973,

2-00 P. M.

ಶ್ರೀಮತಿ ಇ. ಇ. ವಾಜ್.—ಕೆಲವು ನಲ ರೂರಲ್ ಏರಿಯಾಸ್‌ನಲ್ಲಿರುವ ಅಧಿಕಾರಿಗಳಿಗೆ ಅಮೆಂಡೆಡ್ ಆರ್ಡರ್ಸ್ ಗೊತ್ತಾಗುವುದಿಲ್ಲ. ಅಂಥ ಕೇಸುಗಳನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಕೇಸ್ ವಿತ್‌ಡ್ರಾ ಮಾಡಿರುವುದು ಇಲ್ಲಿರುವಂತಹ ದೊಡ್ಡ ದೊಡ್ಡ ವರ್ತಕರು ಏನಿದ್ದಾರೆ ಅವರು ನಿಮ್ಮ ಪಕ್ಷಕ್ಕೆ ಹಣ ಕೊಡುವುದರಿಂದ. ಅವರ ಒತ್ತಡದಿಂದ ಹೀಗೆ ಮಾಡಿದ್ದೀರಲ್ಲವೇ ?

ಶ್ರೀಮತಿ ಇ. ಇ. ವಾಜ್.—ಇದು ತಪ್ಪು ಅಭಿಪ್ರಾಯ. ಅಂಥದ್ದು ಏನಾದರೂ ಇದ್ದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ನೀವು ಹಾಕಿದ ಕೇಸುಗಳಲ್ಲಿ ಬೆಂಗಳೂರು ನಗರದಲ್ಲಿ ಎಷ್ಟೆಷ್ಟು ಸೇರಿವೆ ?

ಶ್ರೀಮತಿ ಇ. ಇ. ವಾಜ್.—ಅದರ ಬಗ್ಗೆ ಪ್ರತ್ಯೇಕವಾಗಿ ಒಂದು ಪಟ್ಟಿಯನ್ನು ಒದಗಿಸಿದ್ದೇವೆ. ಅದನ್ನು ತಾವು ನೋಡಬಹುದು.

ಶ್ರೀ ಎಂ. ಬಿ. ರಾಮಸ್ವಾಮಿ.—ಇಷ್ಟು ಕೇಸುಗಳಲ್ಲಿ ಎಷ್ಟು ಕೇಸುಗಳ ಮೇಲೆ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ತಿಳಿಸುತ್ತೀರಾ ?

Smt. E. E. VAZ.—Number of cases charge sheeted 2,381; No, of cases prosecuted 1,638, cases pending trial 778, cases acquitted 179, case under investigation 397, cases dropped 513.

Sri D. B. KALMANKAR.—May I know what type of action is taken against them ?

Smt. E. E. VAZ.—In some cases persons have been fined, in some cases goods have been confiscated and other action taken according to law.

ಶ್ರೀ ಎಸ್. ಬಂಗಾರಪ್ಪ.—ತಾವು (ಅ) ಉತ್ತರಕ್ಕೆ 203 ಕೇಸುಗಳನ್ನು ಕೈಬಿಡರಾಗಿದೆ ಎಂದು ಹೇಳಿದ್ದೀರಿ. ಅಂದರೆ ಈ 203ರಲ್ಲಿ ಕಾನೂನುಗಳ ಬಗ್ಗೆ ಅಧಿಕಾರಿಗಳಿಗೆ ತಿಳಿವಳಿಕೆ ಇಲ್ಲದೆ ಹೀಗೆ ಕೈಬಿಟ್ಟಿದ್ದಾರೆಯೇ ಅಥವಾ ಬೇರೆ ಕಾರಣಗಳಿಗೆ ಮಾಡಿದ್ದಾರೆಯೇ ?

ಶ್ರೀಮತಿ ಇ. ಇ. ವಾಜ್.—ಅದು ಒಂದೇ ಅಲ್ಲ ; ಅದರ ಜೊತೆಗೆ ಇತರ ಕಾರಣಗಳೂ ಇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇತ್ತೀಚೆಗೆ ತೀರ್ಥಹಳ್ಳಿಯ ಆಗುಂಬೆಯಲ್ಲಿ ರಾತ್ರಿಯಲ್ಲಿ ಆರಾಧಾನ್ಯವನ್ನು ಕೊಂಡೊಯ್ಯುತ್ತಿದ್ದಾಗ ಪೋಲೀಸರು ತಡೆಗಟ್ಟಿದರು. ಆಗ ಇವರು ಪೋಲೀಸರಿಗೆ ಹೊಡೆದು ತಪ್ಪಿಸಿಕೊಂಡು ಹೋಗಿದ್ದಾರೆ. ಅದು ಸಹ ಇದರಲ್ಲಿ ಸೇರಿದೆಯೇ ?

ಶ್ರೀಮತಿ ಇ. ಇ. ವಾಜ್.—ಅದು ಡಿಸೆಂಬರ್ 31ರ ಒಳಗೆ ಆಗಿದ್ದರೆ ಅದು ಇದರಲ್ಲಿ ಸೇರಿಸಲ್ಪಟ್ಟಿದೆ.

Sri B. B. SAYANAK.—You have said that 203 cases were withdrawn and 100 cases resulted in acquittal. Was it because there was no evidence ! Does that not mean it was an harassment to the persons who were prosecuted ?

Smt. E. E. VAZ.—Whenever a case is detected prosecution is launched and when they are proved such cases cannot be withdrawn.

Sri V. N. PATIL —May I know what is the maximum amount of penalty levied and what was the maximum quantity of foodgrains confiscated ?

(Departmental Library) (B)
ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ) 6007
Accession No.....

ದಿನಾಂಕ Date.....

Smt. E. E. VAZ.—I can give details.—

From 1-1-1972	to	31-12-1972	quantity seized	91,240 qtls.
			worth	Rs. 50,08,600
From 1-1-1973	to	22-3-1973	quantity seized	22,298 qtls.
			worth	Rs. 15,63,540

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಉತ್ತರದಲ್ಲಿ 3359 ಕೇಸುಗಳನ್ನು ಬುಕ್ ಮಾಡಿದ್ದಾರೆಂದು ಹೇಳಿದ್ದೀರಿ. ಅಂದರೆ ಇದರಲ್ಲಿ 10 ಕೆಜಿ, 20 ಕೆಜಿ, 15 ಕೆಜಿ ಯನ್ನು ಹಿಡಿದದ್ದೇ ಹೆಚ್ಚು ಎಂದು ಕಾಣುತ್ತದೆ. ಮನೆಗೆ ಉಪಯೋಗಿಸಲು ಇಟ್ಟಂತಹ ಅಕ್ಕಿಯನ್ನು ಪೋಲೀಸರು ಹಿಡಿದು ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಇ. ಇ. ವಾಜ್.—ಮಾನ್ಯ ಸದಸ್ಯರಿಗೆ ಗೊತ್ತಿದೆ ಹೇಗೆ ನಾವು ಲಾರಿಯನ್ನು ಹಿಡಿಯುತ್ತೇವೆಯೋ ಹಾಗೆಯೇ ಹೆಡ್ ಲೋಡುಗಳನ್ನು ಸಹ ಹಿಡಿಯುತ್ತಿದ್ದೇವೆ. ಲಾರಿಯಲ್ಲಿ ಹೋದರೆ ಹಿಡಿಯುತ್ತಾರೆಂದು 20-30 ಜನರು ಸೇರಿ ಹೆಡ್ ಲೋಡಿನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಹಾಗೆ ಆದು ಕಾಣುತ್ತದೆ. ಅದರ ಜೊತೆಯಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಸಹ ಗಮನಿಸುತ್ತೇವೆ.

Sri D. DEVARAJ URS.—Let us know if there are any cases which have been booked and which do not come within the purview of law. If there are any cases which do not come within the purview of law, we are wrong.

ಶ್ರೀ ಎಚ್. ಡಿ. ದೇವೇಗೌಡ.—ವಿವರಣೆ ಬೇಕಾದರೆ ಕೊಡಬಹುದು, ಸಣ್ಣ ಪುಟ್ಟ ಕೇಸುಗಳು ಅಂದರೆ 5 ಕೆಜಿ, 10 ಕೆಜಿ ಯ ಕೇಸುಗಳೇ ಇದರಲ್ಲಿ ಜಾಸ್ತಿ ಇವೆ.

Sri D. DEVARAJ URS.—I would submit that we need not jump to conclusions. If there is any harassment, it is highly wrong and I don't intend to continue such things. As long as the cases are booked according to law, nothing can be done.

Sri H. D. DEVE GOWDA.—You have given here hundreds of cases which have been acquitted without prosecution. Such cases are booked only with the purpose of harrasment by the police officers.

Sri D. DEVARAJ URS.—We are not in the least interested in harassing the people. With that approach we should not look into the cases. Sometimes withdrawals do take place for want of evidence, etc. Under what circumstance each case has been withdrawn is a matter which has got to be gone into. In majority of cases we cannot straightaway accept that they were all with a view to cause harassment. That is my point.

Mr. DEPUTY SPEAKER.—We will go to the next item.

CALLING ATTENTION TO A MATTER OF URGENT PUBLIC IMPORTANCE

re : **Distrubances and Lathi Charge in Mudigere.**

Sri M. S. KRISHNAN (Malleswaram).—I call the attention of the Hon'ble Chief Minister to the disturbance and lathi charge in Mudigere.

Karnataka State Archives,
(Departmental Library)